Date : 20-10-2015

# ಆಹಾರ ಸಂಸ್ಕರಣೆಗಾಗಿ ಬೇಳೆಕಾಳು ದಾಸ್ತಾನು ಮಿತಿ ಹೇರಿಕೆ

ಬೇಳೆಕಾಳುಗಳ ಲಭ್ಯತೆ ಹೆಚ್ಚಳಗೊಳಿಸಲು, ಕೇಂದ್ರ ಸರಕಾರ ಹಲವಾರು ಕ್ರಮಗಳನ್ನು ಕೈಗೊಂಡಿದ್ದು, ಬೇಳೆಕಾಳು ರಫ್ತು ನಿಷೇದ, ಶೂನ್ಯ ಆಮದು ತರದ ಮುಂದುವರಿಕೆ ಮತ್ತು ಹೆಚ್ಚುವರಿಯಾಗಿ ದುರಸ್ಥಿರೀಕರಣ ನಿಧಿಯಿಂದ 5000 ಟನ್‌ಗಳ ಆಮದು ಮಾಡುತ್ತಿದೆ. ಅವಶ್ಯಕ ವಸ್ತು ಕಾಯಿದೆ 1955ಕ್ಕೆ ತಿದ್ದುಪಡಿ ತಂದು ತಕ್ಷಣದಿಂದ ಬೇಳೆಕಾಳು ದಾಸ್ತಾನು ಮಿತಿ ಹೇರಿಕೆಗೆ ಅನುಕೂಲಿಸುವಂತೆ, ಆಮದು ಮೂಲದ ಬೇಳೆಕಾಳು ದಾಸ್ತಾನು, ರಫ್ತುದಾರರಲ್ಲಿರುವ ದಾಸ್ತಾನು, ಬೇಳೆಕಾಳು ತಯಾರಿತದಲ್ಲಿರುವ ಕಚ್ಚಾ ವಸ್ತುಗಳ ದಾಸ್ತಾನು, ಡಿಪಾರ್ಟ್‌ಮೆಂಟ್ ಸ್ಟೋರ್‌ಗಳಲ್ಲಿ ಚಿಲ್ಲರೆ ಮಾರಾಟಕ್ಕೆ ಇರುವ ದಾಸ್ತಾನುಗಳು ದಾಸ್ತಾನು ಮಿತಿಯೊಳಗೆ ಬರಲಿವೆ. ಈ ಮೇಲಿನ ಕ್ರಮಗಳಿಂದ ಬೇಳೆಕಾಳು ಲಭ್ಯತೆ ಹೆಚ್ಚಳವಾಗಿ ಅಕ್ರಮ ದಾಸ್ತಾನು ಕಡಿಮೆಯಾಗಿ ದರ ಕಡಿಮೆಯಾಗುವ ಸಂಭವಿದೆ.

ಈ ಮೊದಲು ಬೇಳೆಕಾಳು, ಖಾದ್ಯತೈಲ ಮತ್ತು ಖಾದ್ಯತೈಲಬೀಜಗಳ ಮೇಲಿನ ದಾಸ್ತಾನುಮಿತಿಯನ್ನು 30–9–2016ರ ತನಕ ಮುಂದುವರಿಸಲಾಗಿತ್ತು. ಆದರೆ ಇದರಲ್ಲಿ ನಾಲ್ಕು ತರದ ದಾಸ್ತಾನುಗಳಿಗೆ ವಿನಾಯತಿಯಿತ್ತು. ಅದೇನಂದರೆ ಆಮದು ದಾಸ್ತಾನು, ರಫ್ತುದಾರರ ದಾಸ್ತಾನು, ಪರವಾನಿಗೆ ಹೊಂದಿದ ಆಹಾರ ಸಂಸ್ಕರಣೆದಾರರ ದಾಸ್ತಾನು, ದೊಡ್ಡ ಡಿಪಾರ್ಟ್‌ಮೆಂಟ್ ಸ್ಟೋರ್‌ಗಳ ಚಿಲ್ಲರೆ ಮಾರಾಟಕ್ಕಾಗಿನ ದಾಸ್ತಾನು ಇವುಗಳಿಗೆ ವಿನಾಯತಿ ನೀಡಲಾಗಿತ್ತು. ಆದರೆ ಈಗ ಸರಕಾರ ಈ ವಿನಾಯತಿಯನ್ನು ಹಿಂತೆಗೆದಿದೆ.

14–10–2015ರಂದು ಕೇಂದ್ರ ಅರ್ಥ ಸಚಿವ ಹಾಗೂ ಇತರ ಉನ್ನತ ಆಂತರಿಕ ಸಚಿವರ ಸಭೆಯಲ್ಲಿ ಬಫರ್ ದಾಸ್ತಾನು ಹೊಂದುವ, ಬೇಳೆಕಾಳು ಆಮದು ಮಾಡಲು, ಅಕ್ರಮ ದಾಸ್ತಾನುಗಳ ಬ್ಲಾಕ್ ಮಾರ್ಕೆಟ್ ಮಾಡುವವರ ವಿರುದ್ಧ ಬಿಗು ಕಾರ್ಯಚರಣೆ, ಆಮದು ಬೇಳೆಕಾಲುಗಳ ಸಾಗಾಣಿಕಾ ವೆಚ್ಚ ಬರಿಸುವುದು ಹಾಗೂ ಮಿಲ್ಲಿಂಗ್ ಮತ್ತು ಹ್ಯಾಂಡ್ಲಿಂಗ್ ಚಾರ್ಜುಗಳನ್ನು ಬೆಲೆ ಸ್ಥಿರೀಕರಣ ನಿಧಿಯಿಂದ ಪೂರೈಸುವುದು, ರಾಜ್ಯಗಳ ದಾಸ್ತಾನು ಮಿತಿ ಹೇರಿಕೆಗೆ ಪ್ರೋತ್ಸಾಹಿಸುವುದು ಹೆಚ್ಚು ಬೇಳೆಕಾಳು ಉತ್ಪಾದಿಸಲು ಬೆಂಬಲ ಬೆಲೆಯನ್ನು ಉದ್ದು ಹಾಗೂ ತೊಗರಿಗೆ ಕ್ವಿಂ.ಗೆ. ರೂ.4625 ಮತ್ತು ಹೆಸರುಕಾಳಿಗೆ ಕ್ವಿಂ. ಗೆ ರೂ.4850ಕ್ಕೆ ನಿಗದಿಪಡಿಸಲು ನಿರ್ಧರಿಸಿದರು.

ಕ್ಯಾಬಿನೆಟ್ ಕಾರ್ಯದರ್ಶಿ ದಿನವಹಿ ನೆಲೆಯಲ್ಲಿ ಬೆಲೆ ಪರಿಸ್ಥಿತಿಯನ್ನು ಅವಲೋಕಿಸುವುದು ಮತ್ತು ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೆ ಅವಶ್ಯಕ ವಸ್ತುಗಳ ಅದರಲ್ಲೂ ವಿಶೇಷವಾಗಿ ಬೇಳೆಕಾಳುಗಳ ದರ ನಿಗಾ ವಹಿಸಲು ಮತ್ತು ರಾಜ್ಯಗಳೊಂದಿಗೆ ದರ ಹಿಡಿತದಲ್ಲಿಡಲು ಸಹಕರಿಸುವುದಕ್ಕೆ ಸೂಚಿಸಲಾಗಿದೆ. ರಾಜ್ಯ ಸರಕಾರಗಳು ಅಕ್ರಮ ದಾಸ್ತಾನು ತಡೆ, ಬ್ಲಾಕ್ ಮಾರ್ಕೆಟ್ ಮತ್ತು ಲಾಭ ಕೋರತನ ಪಡೆಯಲು ಸಲಹೆ ನೀಡಲಾಗಿದೆ. ಕೇಂದ್ರೀಯ ಭಂಡಾರಕ್ಕೆ 500 ಟನ್ ಬೇಳೆಕಾಳು ಹಾಗೂ ಸಫಲ್‌ಗೆ 200 ಟನ್ ಬೇಳೆಕಾಳು ನೀಡಲಾಗಿದ್ದು, 400 ಕೇಂದ್ರಗಳ ಮೂಲಕ ಮಾರಾಟ ಮಾಡಲಿದೆ. ದೆಹಲಿಯಲ್ಲಿ ಈ ತಿಂಗಳ 16 ರಿಂದ ಈ ಕೇಂದ್ರಗಳ ಮೂಲಕ ಮಾರಾಟ ಆರಂಭವಾಗಿದೆಯೆನ್ನಲಾಗಿದೆ.